

## ಆಕರ್ಷಕ ಶಿಲಾ ದೇಗುಲ

ಹೊಸನಗರ ತಾಲ್ಲೂಕಿನ ಶ್ರೀ ರಾಮಚಂದ್ರಾಪುರ ಮಠದಲ್ಲಿ ನೂತನವಾಗಿ ಸಂಪೂರ್ಣ ಶಿಲೆಯಲ್ಲಿ ನಿರ್ಮಾಣಗೊಳ್ಳುತ್ತಿರುವ ಚಂದ್ರಮೌಳೇಶ್ವರ ದೇವಸ್ಥಾನದ ವಾಸ್ತುಶಿಲ್ಪ ಅತ್ಯಂತ ವಿಶಿಷ್ಟವಾಗಿದೆ. ಶರಾವತಿ ನದಿಯ ತಟದಲ್ಲಿರುವ ಈ ದೇವಸ್ಥಾನ, ಸುಂದರ ಪುಷ್ಕರಣಿಯ ಮಧ್ಯೆ ನಿರ್ಮಿತವಾಗುತ್ತಿದೆ. ಈ ದೇಗುಲದ ತಳಪಾಯದ ಕಲ್ಲುಗಳ ಮೇಲೆ 64 ರೀತಿಯ ವಿಭಿನ್ನ ಜಲಚರಗಳ ಚಿತ್ರವನ್ನು ಕೆತ್ತಲಾಗಿದೆ. ಗಜಪೃಷ್ಠಾಕೃತಿಯಲ್ಲಿ ನಿರ್ಮಾಣವಾಗುತ್ತಿರುವ ಈ ದೇಗುಲದ ನಾಲ್ಕೂ ದಿಕ್ಕುಗಳಲ್ಲಿ ಕೆತ್ತಲಾಗಿರುವ ಕಲ್ಲಿನ ಬಾಗಿಲುಗಳು ಅತ್ಯಂತ ಆಕರ್ಷಕವಾಗಿವೆ.

—ರೇಖಾ ನವೀನ್ ಕುಮಾರ್, ಹೊಸದುರ್ಗ

## ಇಸಳೂರು ಕೆರೆ ಗೇಟು

ಶಿರಸಿಯ 'ಶಿರಸಿ–ಹುಬ್ಬಳ್ಳಿ' ರಸ್ತೆಯಲ್ಲಿ ಕೇವಲ ಆರು ಕಿ.ಮೀ. ದೂರದಲ್ಲಿದೆ ಇಸಳೂರಿನ ವಿಶಾಲವಾದ ಧರ್ಮಾ ಕೆರೆ. ವರ್ಷದ ಎಲ್ಲಾ ಕಾಲದಲ್ಲೂ ಸಮೃದ್ಧ ನೀರನ್ನು ಹೊಂದಿರುವ ಪ್ರಾಚೀನ ಕೆರೆ ಇದು. ನೂರಾರು ಎಕರೆ ಕೃಷಿ ಜಮೀನಿಗೆ ನೀರುಣಿಸುತ್ತಿದೆ. ಹಲವು ಪ್ರಾಚೀನ ಅವಶೇಷಗಳ ಈ ಪ್ರದೇಶದಲ್ಲಿ ಅಂದಿನ ಸೋದೆ ರಾಜರುಗಳಿಂದ ನಿರ್ಮಾಣಗೊಂಡ ಹಲವು ನೀರಾವರಿ ಕೆರೆಗಳು ಈಗಲೂ ಸುಸ್ಥಿತಿಯಲ್ಲಿದ್ದು ಗಮನ ಸೆಳೆಯುತ್ತವೆ. ವಿಶೇಷವೆಂದರೆ, ನೂರಾರು ವರ್ಷಗಳ ಹಿಂದೆ ನಿರ್ಮಾಣಗೊಂಡ ದೊಡ್ಡ ಕೆರೆಗಳಲ್ಲಿ, ನೀರನ್ನು ಸಂಗ್ರಹಿಸಿ ಹೆಚ್ಚಾಗುವ ನೀರನ್ನು ಮಳೆಗಾಲದಲ್ಲಿ ಹೊರಗೆ ಕಳಿಸುವ ಮತ್ತು ಬೇಸಿಗೆಯಲ್ಲಿ ನೀರನ್ನು ಹಿಡಿದಿಡುವ ಮೂಲಕ ಕೆರೆಯನ್ನು ಸುರಕ್ಷಿತವಾಗಿಡುವ ಅಂದಿನ ವಿಶಿಷ್ಟ ತಂತ್ರಜ್ಞಾನದ 'ಶಿಲಾ ಬಾಗಿಲು' (ಗೇಟ್) ಮಹತ್ವ ಪಡೆದಿದ್ದು, ಕಲಾತ್ಮಕವಾಗಿರುವ ಅವು ಈಗಲೂ ಸುಸ್ಥಿತಿಯಲ್ಲಿವೆ. ಅಂದಿನ ರಾಜರುಗಳ ಕೃಷಿ, ನೀರಾವರಿ ಕೆರೆಗಳ ಬಗೆಗಿನ ಕಾಳಜಿ, ಕಲಾಸಕ್ತಿ ಮೆಚ್ಚುವಂತಿದೆ. ಹಲವಾರು ವರ್ಷವಾದರೂ ಕಲ್ಲಿನ ಗೇಟು ಭದ್ರವಾಗಿದೆ.

—ಅರ್ಚನಾ ಬೊಮ್ನಳ್ಳಿ, ಶಿರಸಿ





## ಪಕ್ಷಿ ಭಾಷೆಯಾದ 'ಶಿಳ್ಳೆ'

ಈ ಭಾಷೆಯನ್ನು ಯಾರೂ ಮಾತನಾಡುವುದಿಲ್ಲ. ಆದರೂ ಮೂರು ಶತಮಾನಗಳಿಂದ, ಉತ್ತರ ಟರ್ಕಿಯ ದೂರದ ಪರ್ವತಗಳಲ್ಲಿ ವಾಸಿಸುವ ರೈತರು ಸೀಟಿಗಳ ಮೂಲಕ ದೂರದವರೆಗೆ ಸಂವಹನ ನಡೆಸುತ್ತಿದ್ದಾರೆ. ಇದು ಕುಸ್ ಡಿಲಿ (kus dili) ಎಂಬ ಭಾಷೆಯಾಗಿದ್ದು, ಇದನ್ನು 'ಪಕ್ಷಿ ಭಾಷೆ' ಎಂದೂ ಕರೆಯುತ್ತಾರೆ. ಇದನ್ನು ಇಂದಿಗೂ ಬಳಸಲಾಗುತ್ತಿದೆಯಾದರೂ ಸೆಲ್ ಫೋನ್ ಯುಗದಲ್ಲಿ ಕಡಿಮೆ ಜನರು ಇದನ್ನು ಕಲಿಯುತ್ತಿದ್ದಾರೆ. ಉತ್ತರ ಟರ್ಕಿಯ ಕಪ್ಪು ಸಮುದ್ರದ ನಿವಾಸಿಗಳ 'ಪಕ್ಷಿ ಭಾಷೆ'ಯನ್ನು ಸುಮಾರು 10,000 ಜನರು, ಹೆಚ್ಚಾಗಿ ಗಿರ್ಸನ್ ಕೌಂಟಿಯ ಕನಾಚಿ ಕೌಂಟಿಯಲ್ಲಿ ಬಳಕೆ ಮಾಡುತ್ತಿದ್ದಾರೆ. ಮೊಬೈಲ್ ಫೋನ್‌ಗಳ ಬಳಕೆ ಹೆಚ್ಚಾಗುತ್ತಿರುವುದರಿಂದ ಈ ಭಾಷೆಯು ಅಳಿವಿನಂಚಿನಲ್ಲಿದೆ. ಯುನೆಸ್ಕೊ ಇದನ್ನು 'ಸಂರಕ್ಷಿಸಬೇಕಾದ ಅಮೂರ್ತ ಸಾಂಸ್ಕೃತಿಕ ಪರಂಪರೆ' ಪಟ್ಟಿಯಲ್ಲಿ ಸೇರಿಸಿದೆ.

—ವಿಶ್ವನಾಥ್ ಬಳುವನೇರಲು



## ಮನಸೆಳೆವ ಗೋಡೆ ಚಿತ್ರಗಳು

ಬೇಸಿಗೆಯಲ್ಲಿ ಮರ ಗಿಡಗಳು ಒಣಗಿ ಗಣಿದೂಳಿನಿಂದ ಕೆಂಪಾಗಿ ಕಾಣುತ್ತವೆ. ಈ ಕೊರತೆಯನ್ನು ನೀಗಿಸಲೆಂಬಂತೆ ಪ್ರವಾಸಿಗರು ಕೂಡ್ಲಿಗಿ ಕಡೆಯಿಂದ ಬಳ್ಳಾರಿಯ ಸಂಡೂರನ್ನು ಪ್ರವೇಶಿಸುವಾಗ ಅರಣ್ಯ ಇಲಾಖೆಯ ಕಾಂಪೌಂಡ್ ಮೇಲೆ ರಚಿಸಲಾದ ಚಿತ್ರಗಳು ಗಮನಸೆಳೆಯುತ್ತವೆ. ಬಳ್ಳಾರಿ ಜಿಲ್ಲೆಯ ಯಾಣ ಎಂದೇ ಜನಜನಿತವಾಗಿರುವ ಉಬ್ಬಲಗಂಡಿಯಲ್ಲಿರುವ ಕೋಡುಗಲ್ಲುಗಳು, ಪುಟ್ಟಣ್ಣ ಕಣಗಾಲ್ ನಿರ್ದೇಶನದಲ್ಲಿ ಚಿತ್ರೀಕರಿಸಲ್ಪಟ್ಟಿರುವ 'ಮಾನಸ ಸರೋವರ' ಚಿತ್ರದ ಹೆಸರಿನಿಂದಲೇ ಕರೆಯುವ, 'ನಾರಿಹಳ್ಳ ಜಲಾಶಯ'ದ ರಮಣೀಯ ದೃಶ್ಯ, ಐದು ದಶಕಗಳ ಇತಿಹಾಸವುಳ್ಳ, 220 ಮೀಟರ್ ಉದ್ದದ 'ಭೀಮಗಂಡಿ ಟನಲ್' ಸಂಡೂರಿನ ಅರಣ್ಯ ಪ್ರದೇಶದಲ್ಲಿ ಕಾಣಸಿಗುವ ರಾಜ್ಯ ಪಕ್ಷಿ ನೀಲಕಂಠ, ಮರಕುಟಿಗ, ಕರಡಿಗಳ ಸಮೂಹ, ಚಿರತೆ, ಹುಲಿ, ಕೊಂಡಗುರಿ ಮೊದಲಾದ ಚಿತ್ರಗಳು ಸಂಡೂರು ಪರಿಸರದ ಗರಿಮೆಗೆ ಸಾಕ್ಷಿಯಾಗಿ ನಿಲ್ಲುತ್ತವೆ. ಚಿತ್ರದುರ್ಗದ ಕಲಾವಿದ ನಾಗರಾಜ್ ಅವರ ಕುಂಚದಲ್ಲಿ ಮೂಡಿ ಬಂದಿರುವ ಚಿತ್ರಗಳು ಜನರ ಮನ್ನಣೆಗೆ ಪಾತ್ರವಾಗಿವೆ.

—ಜಿ. ಪದ್ಮಾ, ಸಂಡೂರು